**International Women's Day programme at ICAR-DCR, Puttur**

ICAR-DCR, Puttur has conducted International Women's Day programme on 8th March, 2023. The programme started with ICAR Geet. Mrs. Annapoorna Sharma, an entrepreneur, Poorna Enterprises, Aryapu, Puttur, who was the chief guest of the programme delivered a talk on 'Gender Quality in entrepreneurship'. She mentioned that women are more powerful, multi-tasking and they deserve respect. Dr. K. Vanitha, Senior Scientist of the Directorate made a presentation on 'Women work force in India – Challenges and Initiatives' during the occasion. Dr. J.D. Adiga, Director, ICAR-DCR presided over the function and expressed his wishes on International Women's day-2023. Then, there were cultural activities like singing and quiz for the staff. The programme ended with national anthem.

**ಐಸಿಆರ್- ಡಿಸಿಆರ್ ಕೇಂದ್ರದಲ್ಲಿ ಅಂತರ ರಾಷ್ಟ್ರೀಯ ಮಹಿಳಾದಿವಸ ಆಚರಣೆ**

ದಿನಾಂಕ 8 ಮಾರ್ಚ್ 2023 ರಂದು ಪುತ್ತೂರಿನ ಮೊಟ್ಟೆತ್ತಡ್ಕದಲ್ಲಿರುವ ಐಸಿಆರ್-ಡಿಸಿಆರ್ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿವಸವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ ಉದ್ಯಮಿ ಶ್ರೀಮತಿ ಅನ್ನಪೂರ್ಣಾ ಶರ್ಮರವರು ಕಾರ್ಯಕ್ರಮದಲ್ಲಿ "ಉದ್ಯಮ ವಲಯದಲ್ಲಿ ಲಿಂಗ ಸಮಾನತೆ" ಎಂಬ ವಿಷಯದ ಕುರಿತಾಗಿ ಮಾತನಾಡಿದರು. ಅನ್ನಪೂರ್ಣಾರವರು ಪುತ್ತೂರಿನ ಆರ್ಯಾಪುವಿನಲ್ಲಿ 'ಪೂರ್ಣಾ ಎಂಟರ್ ಪ್ರೈಸಸ್' ಹೆಸರಿನ ಉದ್ಯಮವನ್ನು ನಡೆಸುತ್ತಿದ್ದಾರೆ. ಸಭೆಯನ್ನುದ್ದೇಶಿಸಿ ಅವರು, ಯಾವುದೇ ವೃತ್ತಿ, ಉದ್ಯಮ ಅಥವಾ ವ್ಯವಹಾರಗಳಲ್ಲಾಗಲೀ ಅದರ ಯಶಸ್ಸಿಗೆ ಪರಸ್ಪರ ಅರ್ಥೈಸುವಿಕೆಯ ಅಗತ್ಯತೆ ಬಹಳ ಪ್ರಮುಖವಾದದ್ದು ಎಂದರು. ಮಹಿಳೆಯರು ಸಹಜ ಸಾಮರ್ಥ್ಯ ಉಳ್ಳವರಾಗಿ ಯಾರಿಗೂ ಮತ್ತು ಯಾವುದಕ್ಕೂ ಕಡಿಮೆಯಿರದಂತೆ ಎಲ್ಲಾ ತರಹದ ಕಾರ್ಯವನ್ನು ನಿಭಾಯಿಸಬಲ್ಲವರಾಗಿದ್ದಾರೆಂದು ಅವರ ಅನುಭವ ಮತ್ತು ಸಾಂದರ್ಭಿಕ ಉದಾಹರಣೆಗಳ ಮೂಲಕ ಸಭೆಗೆ ಮನದಟ್ಟು ಮಾಡಿದರು.

ಸಂಸ್ಥೆಯ ಹಿರಿಯ ವಿಜ್ಞಾನಿ ಡಾ. ಕೆ. ವನಿತಾರವರು 'ವಿಮೆನ್ ವರ್ಕ್ ಫೋರ್ಸ್ ಇನ್ ಇಂಡಿಯಾ – ಚಾಲೆಂಜಸ್ & ಇನಿಷಿಯೇಟಿವ್ಸ್' ಕುರಿತಂತೆ ಮಾತನಾಡಿದರು. ಬಳಿಕ ಸಂಸ್ಥೆಯ ನಿರ್ದೇಶಕರಾದ ಡಾ. ಜೆ ದಿನಕರ ಅಡಿಗರವರು ಅಂತರ ರಾಷ್ಟ್ರೀಯ ಮಹಿಳಾ ದಿವಸದ ಪ್ರಯುಕ್ತ ಎಲ್ಲರಿಗೂ ಶುಭಾಶಯವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಿಗಾಗಿ ರಸಪ್ರಶ್ನೆ ಮತ್ತು ಹಾಡುಗಾರಿಕೆ ಕಾರ್ಯಕ್ರಮ ನಡೆಯಿತು. ಸುಮಾರು 80 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಿಜ್ಞಾನಿ ಡಾ. ಬಬ್ಲಿ ಮೋಗ್ ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಸಂಸ್ಥೆಯ ವಿಜ್ಞಾನಿ ಡಾ. ವೀಣಾ ಜಿ. ಎಲ್ ರವರು ಕಾರ್ಯಕ್ರಮವನ್ನು ನಿರ್ವಹಿಸಿದರು.


Day-2023
for Gender

